**ಓ.ಎಸ್. ನಂ.  135/2016**　　　　　　　　　　　　　　　**ಪಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ  17.1.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಪಾಟೀ ಸವಾಲುಃ 12 ನೇ ಪ್ರತಿವಾದಿ ಪರ ಶ್ರೀ ಎ.ಎಸ್.ಎಲ್ ವಕೀಲರಿಂದಃ</u>

ನನಗೆ ಈಗ 41 ವರ್ಷ ವಯಸ್ಸಾಗಿರುತ್ತದೆ.  ನಾನು ಡಿಪ್ಲೋಮ ವಿದ್ಯಾಭ್ಯಾಸವನ್ನು 2001-02 ರಲ್ಲಿ ಓದಿರುತ್ತೇನೆ. ನನ್ನ ತಂದೆ 1 ಅಥವಾ 2 ನೇ ತರಗತಿ ಓದಿರಬಹುದು.  ನನ್ನ ತಂದೆ ಈರುಳ್ಳಿ, ಬೆಳ್ಳುಳ್ಳಿ, ಅಲೂಗೆಡ್ಡೆ ವ್ಯಾಪಾರವನ್ನು ಮೈಸೂರಿನ ಬಂಡಿಪಾಳ್ಯದಲ್ಲಿ ಮಾಡುತ್ತಿದ್ದರು.  ದಾವಆಸ್ತಿಯನ್ನು ನನ್ನ ತಂದೆ ಖರೀದಿಸಿದಾಗ ನನಗೆ 17-18 ವರ್ಷ ವಯಸ್ಸಾಗಿತ್ತು.  ದಾವಆಸ್ತಿ ಖರೀದಿಸಿದಾಗ ನಾನು ಡಿಪ್ಲೋಮ ವಿದ್ಯಾಭ್ಯಾಸ ಮಾಡುತ್ತಿದ್ದೆ. ನನಗೆ ಈ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ.  ದಾವಪತ್ರ ತಯಾರಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ಸಂಪುರ್ಣವಾಗಿ ನೀಡಿರುತ್ತೇನೆ.  ಪ್ರತಿವಾದಿಯರ ಸಂಪೂರ್ಣ ವಿವರವನ್ನು ನಾನೇ ನೀಡಿರುತ್ತೇನೆ.  ದಾವಆಸ್ತಿಯ ಕ್ರಯದ ಬಗ್ಗೆ ನನ್ನ ತಂದೆ ನನಗೆ ಹೇಳಿರುತ್ತಾರೆ.  ನಿಪಿ8 ಕ್ರಯಪತ್ರವಾಗಿರುವ ಬಗ್ಗೆ ನನಗೆ 2007-08 ರಲ್ಲಿ ಗೊತ್ತಾಗಿರುತ್ತದೆ.  ಕ್ರಯಪತ್ರದಲ್ಲಿ ಹೇಳಿರುವ ಆಸ್ತಿಯು ಮಾರಾಟಕ್ಕಿದೆ ಎಂದು ನನ್ನ ತಂದೆಗೆ ಹೇಗೆ ಗೊತ್ತಾಗಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ.  ನಿಪಿ8 ದಾಖಲೆ ಮಾಡುವ ಪೂರ್ವದಲ್ಲಿ ನನ್ನ ತಂದೆ ಕ್ರಯದ ಕರಾರು ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.  2008 ರಲ್ಲಿ ಕ್ರಯಪತ್ರವಾಗಿರುವ ವಿಚಾರ ಗೊತ್ತಾದ ನಂತರ ಕ್ರಯದ ಕರಾರು ಪತ್ರವಾಗಿರುತ್ತದೋ ಇಲ್ಲವೋ ಎಂದು ನನ್ನ ತಂದೆ ಬಳಿ ವಿಚಾರಿಸಿರುವುದಿಲ್ಲ.  ಸದರಿ ಆಸ್ತಿ ಮಾರಾಟಕ್ಕಿದ್ದ ಬಗ್ಗೆ ನನ್ನ ತಂದೆಗೆ ಹೇಗೆ ಗೊತ್ತಾಯಿತು ಎಂದು ಅವರ ಬಳಿ ಕೇಳಿರುವುದಿಲ್ಲ.  ನಿಪಿ8 ದಾಖಲೆಯಾದಾಗ ದಾವಆಸ್ತಿಯು 1 ರಿಂದ 4 ನೇ ಪ್ರತಿವಾದಿಯರ ಹೆಸರಿನಲ್ಲಿತ್ತು.  ಆ ಬಗ್ಗೆ ದಾಖಲಾತಿಯನ್ನು ನಾನು ಹಾಜರುಪಡಿಸಿರುತ್ತೇನೆ.  ಸಾಕ್ಷಿದಾರರು ತಾನು ಹಾಜರುಪಡಿಸಿರುವ ದಾಖಲಾತಿಯನ್ನು ನೋಡಿ ಅಂತಹ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎನ್ನುವರು.  ನಿಪಿ8 ದಾಖಲೆಯಾದಾಗ ದಾವಆಸ್ತಿಯು 1 ರಿಂದ 4 ನೇ ಪ್ರತಿವಾದಿಯರ ಹೆಸರಿನಲ್ಲಿರಲಿಲ್ಲ ಎಂದರೆ ಸರಿಯಲ್ಲ.  ಅವರ ಹೆಸರಿನಲ್ಲಿದ್ದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ.  ಸರ್ವೆ ನಂ.64 ರ ಆಸ್ತಿಯು ಮೂಲತಃ ದಸ್ತಗಿರಿ ಸಾಬ್ ರವರಿಗೆ ಸೇರಿತ್ತು.  ಅದರ ವಿಸ್ತೀರ್ಣ 4-24 ಎಕರೆ ಆಗಿರುತ್ತದೆ.  ದಾವಆಸ್ತಿಗಳಲ್ಲಿ 2 ಐಟಂಗಳಿರುತ್ತದೆ. ಸರ್ವೆ ನಂ.65 ರ ಆಸ್ತಿಯು ಸಹ ಮೂಲತಃ ದಸ್ತಗಿರಿ ಸಾಬ್ ರವರಿಗೆ ಸೇರಿತ್ತು.  ಅವರ ಹೆಸರಿನಲ್ಲಿದ್ದ ಎರಡು ಆಸ್ತಿಗಳ ದಾಖಲಾತಿಗಳನ್ನು ನಾನು 2015-16 ರಲ್ಲಿ ನೋಡಿರುತ್ತೇನೆ.  ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.  ನಿಪಿ3 ಮತ್ತು 4 ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.  ನಿಪಿ3 ರಲ್ಲಿ ದಸ್ತಗಿರಿ ಸಾಬ್ ಎಂದು ಸಹಿ ಇದ್ದು, ನಿಪಿ4 ರಲ್ಲಿ ಅಬ್ದುಲ್ ಸಾಬ್ ಎಂದು

ಸಹಿ ಇರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ನಿಪಿ4 ರಲ್ಲಿ ಅರ್ಜಿದಾರರ ಹೆಸರು ದಸ್ತಗಿರಿ ಸಾಬ್ ಎಂದು ಇರುತ್ತದೆ ಎನ್ನುವರು. ನಿಪಿ1 ರಲ್ಲಿ ಸರ್ವೆ ನಂ.31 ವಿಸ್ತೀರ್ಣ 4-24 ಎಕರೆ ಜಮೀನು ದಸ್ತಗಿರಿ ಸಾಬ್ ರವರ ಹೆಸರಿಗೆ ಮಂಜೂರಾಗಿರುತ್ತದೆ. ನಿಪಿ2 ರಲ್ಲಿ ಸರ್ವೆ ನಂ.31 ವಿಸ್ತೀರ್ಣ 4-24 ಎಕರೆ ಜಮೀನು ಅಬ್ದುಲ್ಲ ಹೆಸರಿಗೆ ಮಂಜೂರಾಗಿರುತ್ತದೆ ಎಂದರೆ ಸರಿ. ಸರ್ಕಾರದಿಂದ ಒಬ್ಬ ವ್ಯಕ್ತಿಗೆ ಒಂದು ಆಸ್ತಿಯನ್ನು ಮಾತ್ರ ಮಂಜೂರು ಮಾಡುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎನ್ನುವರು. ನಾನು ದಾವೆ ದಾಖಲಿಸುವ ಪೂರ್ವದಲ್ಲಿ ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಯನ್ನು ಪರಿಶೀಲನೆ ಮಾಡಿರುತ್ತೇನೆ. ನನ್ನ ತಂದೆ ದಾವಅಸ್ತಿಯನ್ನು ಖರೀದಿಸುವ ಮೊದಲು ಯಾವ ಕಂದಾಯ ದಾಖಲೆಯನ್ನು ನೋಡಿದ್ದರು ಮತ್ತು ಕಾನೂನು ಅಭಿಪ್ರಾಯ ಪಡೆದಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಯಾವುದೇ ವ್ಯಕ್ತಿ ಆಸ್ತಿಯನ್ನು ಖರೀದಿಸುವಾಗ ಮೂಲ ದಾಖಲೆಗಳನ್ನು ಪಡೆದುಕೊಂಡು ಕಾನೂನು ಅಭಿಪ್ರಾಯ ಪಡೆದುಕೊಳ್ಳುತ್ತಾರೆ ಎಂದರೆ ಸರಿ. ನನ್ನ ತಂದೆ ದಾವಆಸ್ತಿಗಳನ್ನು ಕ್ರಯ ಮಾಡಿಕೊಂಡಾಗ ಕ್ರಯಪತ್ರ ಹೊರತುಪಡಿಸಿ ಬೇರೆ ಯಾವ ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳನ್ನು ಹೊರತುಪಡಿಸಿ ಬೇರೆ ಯಾವ ದಾಖಲಾತಿ ನನ್ನ ಬಳಿ ಇರುವುದಿಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳು ಈ ದಾವೆ ದಾಖಲಿಸುವ ಪೂರ್ವದಲ್ಲಿ ಅಂದರೆ 2016 ರಲ್ಲಿ ಪಡೆದುಕೊಂಡಿರುವ ದಾಖಲಾತಿಗಳು ಎಂದರೆ ಸರಿ.

ದಸ್ತಗಿರಿ ಸಾಬ್ ರವರಿಗೆ 4 ಜನ ಮಕ್ಕಳಿರುತ್ತಾರೆ. ನಂತರ ಸಾಕ್ಷಿದಾರರು ಮುಂದುವರಿದು ಒಬ್ಬನೇ ಮಗನಿರುತ್ತಾನೆ ಎನ್ನುವರು. ಅವರ ಹೆಸರು ಅಬ್ದುಲ್ಲ ಆಗಿರುತ್ತದೆ. ಸದರಿ ಅಬ್ದುಲ್ಲ ರವರಿಗೆ ತುಂಬಾ ಜನ ಮಕ್ಕಳಿದ್ದು, ಅವರ ಹೆಸರು ಅನ್ವರ್, ನಾಜೀರ, ಹಾಜೀರ, ಸಮೀನ, ಇಲಿಯಾಸ್ ಚೋಟೇಸಾಬ್ ಮತ್ತು ಸಾದೀಕ ಆಗಿರುತ್ತದೆ. ಸಾಕ್ಷಿದಾರರು ಮುಂದುವರಿದು ಮಕ್ಕಳು ಮೊಮ್ಮಕ್ಕಳ ಹೆಸರನ್ನು ಹೇಳಿರುತ್ತೇನೆ ಎನ್ನುವರು. ನಂತರ ಪುನಃ ಮುಂದುವರಿದು ಸಾದೀಕ್ ಮತ್ತು ಅನ್ವರ್ ರವರು ಮಾತ್ರ ಅಬ್ದುಲ್ಲ ರವರ ಮಕ್ಕಳು ಎನ್ನುವರು. ನನ್ನ ತಂದೆ ಕ್ರಯಪತ್ರ ಮಾಡಿಕೊಂಡಾಗ ಈ ದಾವೆಯಲ್ಲಿ ಹೇಳಿರುವ ಎಲ್ಲಾ ಪ್ರತಿವಾದಿಗಳನ್ನು ನೋಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಯಾವುದೇ ಪ್ರತಿವಾದಿಯರನ್ನು ನೋಡಿರುವುದಿಲ್ಲ. ನಾನು ಪ್ರತಿವಾದಿಯರ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸರ್ವೆ ನಂ.64 ಮತ್ತು 65 ಆಸ್ತಿಗಳಲ್ಲಿ ಒಂದು ಅಬ್ದುಲ್ಲ ರವರ ಹೆಸರು ಮತ್ತು ಇನ್ನೊಂದು ಆಸ್ತಿಯು ದಸ್ತಗಿರಿ ರವರ ಹೆಸರಿನಲ್ಲಿರುತ್ತದೆ. ಸಾಮಾನ್ಯವಾಗಿ ಎರಡು ಆಸ್ತಿಗಳು ಬೇರೆ ಬೇರೆಯವರ ಹೆಸರಿನಲ್ಲಿದ್ದರೆ ಬೇರೆ ಬೇರೆ ಕ್ರಯಪತ್ರ ಮಾಡಿಕೊಳ್ಳಲಾಗುತ್ತದೆ ಎಂದರೆ ಸರಿಯಲ್ಲ. ದಾವ 2 ಐಟಂ ಆಸ್ತಿಗಳು ಬೇರೆ ಬೇರೆಯವರ ಹೆಸರಿನಲ್ಲಿದ್ದರಿಂದ ಪ್ರತ್ಯೇಕ ಕ್ರಯಪತ್ರ ಮಾಡಿಕೊಳ್ಳಲು ನನ್ನ ತಂದೆಗೆ ತೊಂದರೆ ಇತ್ತಾ ಎಂದರೆ ಸಾಕ್ಷಿದಾರರು ಆಗಿನ ಪರಿಸ್ಥಿತಿ ಹೇಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ ಎನ್ನುವರು. ನಿಪಿ8 ಕ್ರಯಪತ್ರವಾದಾಗ ಯಾರೆಲ್ಲ ಹಾಜರಿದ್ದರು ಎಂದು ನನಗೆ ಖುದ್ದಾಗಿ ಮಾಹಿತಿ ಇರುವುದಿಲ್ಲ. ಸಾಕ್ಷಿದಾರರು ಮುಂದುವರಿದು ಕ್ರಯಪತ್ರವಾಗಿರುವ ಬಗ್ಗೆ ನನಗೆ 2008 ರಲ್ಲಿ ಗೊತ್ತಾಗಿರುತ್ತದೆ ಎನ್ನುವರು.

ನಿಪಿ8 ದಾಖಲೆಗೆ 1 ರಿಂದ 4 ನೇ ಪ್ರತಿವಾದಿಯರು ಸಹಿ ಮಾಡಿರುತ್ತಾರೆ. ನಿಪಿ8 ರಲ್ಲಿ ಅಬ್ದುಲ್ಲ ಮತ್ತು ದಸ್ತಗಿರಿ ಸಾಬ್ ರವರ ಎಲ್ಲಾ ವಾರಸುದಾರರು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಕ್ರಯಪತ್ರವಾದಾಗ ದಸ್ತಗಿರಿ ಸಾಬ್ ರವರ ಎಲ್ಲಾ ವಾರಸುದಾರರನ್ನು ಕರೆಸಿ ಸಹಿ ಮಾಡಿಸಲು ನನ್ನ ತಂದೆಗೆ ತೊಂದರೆ ಇತ್ತಾ ಎಂದು ನಾನು ವಿಚಾರಿಸಿರುವುದಿಲ್ಲ. ನಿಪಿ8 ರಲ್ಲಿ ನಮೂದಿಸಿರುವ ಬಿಲಾಲ್ ಎಂಬುವವರು ಹೆಣ್ಣು ಆಗಿರುತ್ತಾರೆ. ಸದರಿ ಬಿಲಾಲ್ ರವರು ಯಾರ ಮಗಳು ಎಂದು ನನಗೆ ಗೊತ್ತಿರುವುದಿಲ್ಲ. ದಾಖಲಾತಿಯನ್ನು ನೋಡಿ ದಾವಪೂರ್ವದಲ್ಲಿ ಅವರು ಯಾರ ಮಗಳು ಎಂದು ನಾನು ತಿಳಿದುಕೊಂಡಿರುವುದಿಲ್ಲ. ಅಬ್ದುಲ್ಲ ರವರು ದಸ್ತಗಿರಿ ಸಾಬ್ ರವರ ಮಗನಾಗಿರುತ್ತಾರೆ. ನಿಪಿ8 ರಲ್ಲಿ ಬಿಲಾಲ್ ರವರ ಗಂಡ ಅಬ್ದುಲ್ಲ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಅದೇ ರೀತಿ ನಿಪಿ8 ರಲ್ಲಿ ದಸ್ತಗಿರಿ ಸಾಬ್ ರವರ ಮಗ ಅಬ್ದುಲ್ಲ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಯಾವುದೇ ಧರ್ಮದಲ್ಲಿ ಸ್ವಂತ ಒಡಹುಟ್ಟಿದ ಅಣ್ಣ ತಂಗಿ ಅಥವಾ ಅಕ್ಕ ತಮ್ಮ ಮದುವೆಯಾಗುವುದಿಲ್ಲ ಎಂದರೆ ಸರಿ. ಅಬ್ದುಲ್ಲ ರವರಿಗೆ ಒಬ್ಬನೇ ಮಗ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ಇನ್ನೊಬ್ಬ ಮಗಳಿರುತ್ತಾಳೆ ಎನ್ನುವರು. ಅವರ ಹೆಸರು ಅಮೀನಾ ಮತ್ತು ಬಾನು ಆಗಿರುತ್ತದೆ. ನನ್ನ ದಾವೆಯ ಪ್ರಕಾರ ಅಮೀನ ಮತ್ತು ಬಾನು ಬಿಲಾಲ್ ಹಾಗೂ ಅಬ್ದುಲ್ಲ ರವರ ಮಕ್ಕಳಾಗಿರುತ್ತಾರೆ.

ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.